"ವಿಕಾಸ್, ಇಲ್ಲಿ ಬಾ, ಊಟ ಮಾಡು, ನಿನಗೆ ಇಷ್ಟವಾದ ಒಬ್ಬಟ್ಟು ಇದೆ" ಎಂದಳು ಲಾವಣ್ಯ. "ಹಸಿವು ಇಲ್ಲಮ್ಮ" ಎಂದನು ವಿಕಾಸ್. ಒಬ್ಬಟ್ಟು ಎಂದರೆ ಪ್ರಾಣ ಬಿಡುವವನಿಗೆ ಈಗ ಹಸಿವು ಇಲ್ಲವೆ?

"ನಿನಗೆ ಏನು ಆಗಿದೆ?" ಎಂದು ಲಾವಣ್ಯ ಮಗನ ಹತ್ತಿರ ಬಂದಾಗ, ಅವನ ಕಣ್ಣುಗಳಲ್ಲಿ ಒಂದು ಬಗೆಯ ಶಾಂತ ಮನೋಭಾವ ಇತ್ತು.

"ಹೋಂವರ್ಕ್ ಸರಿಯಾಗಿ ಮಾಡಲಿಲ್ಲವೆಂದು ಶಿಕ್ಷಕರು ಬೈದರಾ?" ಕೂಡಲೆ ಆ ಹತ್ತು ವಯಸ್ಸಿನ ಹುಡುಗನಾದ ವಿಕಾಸ್ ತಾಯಿಯ ತೋಳಿನ ಆಸರೆಯಲ್ಲಿ ಸೇರಿಕೊಂಡನು.

"ಪುಟ್ಟಾ, ಏನು ನಡೆಯಿತು?"

ನಡೆದಿದ್ದು ಇಷ್ಟು. ವಿಕಾಸ್ ಶಾಲೆಯ ಬಸ್ಸಿನಲ್ಲಿ ಶಾಲೆಗೆ ಹೋಗುತ್ತಿದ್ದನು. ಆಗ ಬೆಳಗ್ಗಿನ ೮ ಗಂಟೆ. ೯ ಗಂಟೆಗೆ ಶಾಲೆ ಆರಂಭ.

ತಂಗಾಳಿ ಬೀಸುತ್ತಿತ್ತು. ಬಸ್ಸಿನಲ್ಲಿ ೨೫ ಹುಡುಗರು ಇದ್ದರು. ಚಿಕ್ಕ ಹುಡುಗರಲ್ಲಿ ಕೆಲವರು ಮೌನವಾಗಿ ಅಳುತ್ತಿದ್ದರು. ಕೆಲ ಹುಡುಗರು ನಿದ್ದೆ ಮಾಡುತ್ತಿದ್ದರು. ಆದರೆ ವಿಕಾಸ್ ಮಾತ್ರ ಇವರು ಮಾಡುವುದನ್ನು ನೋಡಿ ನಗುತ್ತಿದ್ದನು. ಬಸ್ಸು ೫೦ ಕಿ.ಮೀ. ವೇಗದಲ್ಲಿ ಹೋಗುತ್ತಿತ್ತು. ತಟ್ಟನೆ ವಿಕಾಸ್ ಏನನ್ನೋ ದಿಟ್ಟಿಸಿ ನೋಡಿದನು. "ಅಯ್ಯೋ, ಇದು ಆಪತ್ತು ಅಲ್ಲವೇ" ಎಂದು ಎಣಿಸಿದನು. "ಹಾವು, ಹಾವು" ಎಂದು ಕೂಗಿದನು.

ಚಾಲಕ ಬ್ರೇಕು ಹಾಕಿದಾಗ "ಕ್ರೀಜ್" ಎಂದು ಟೈರ್ ಶಬ್ದ ಮಾಡಿತು. ಧೂಳು ಎಲ್ಲೆಡೆ ಹಾರಿತು. ಹುಡುಗರ ತಲೆಗಳು ಬಲವಾಗಿ ಮುಂದಿನ ಸೀಟಿಗೆ ತಾಕಿದವು. ಕೆಲವರು ಕೆಳಗೆ ಬಿದ್ದರು. ಎಲ್ಲ ಕಡೆ ಗಲಾಟೆ, ಗದ್ದಲ.

"ಹಾವು ಎಲ್ಲಿದೆ?" ಎಂದು ಒಂದು ಕೋಲನ್ನು ಹಿಡಿದುಕೊಂಡು ಚಾಲಕ ಎದ್ದ.

"ಅಲ್ಲಿ, ಅಂಕಲ್" ಎಂದು ವಿಕಾಸ್ ಹೇಳಿದ.

"ಅಮ್ಮ, ಅಮ್ಮ" ಎಂದು ಅಳುತ್ತ ಹಲವಾರು ಹುಡುಗರು ಬಸ್ಸಿನಿಂದ ಇಳಿದು ಓಡಿದರು.

"ಹಾವು ಎಲ್ಲಿದೆ? ಸರಿಯಾಗಿ ಹೇಳು" – ಚಾಲಕ ಎಲ್ಲ ಕಡೆಯಲ್ಲಿಯೂ ಹುಡುಕಿ ಮುಗಿಸಿದ. ಆಗ ವಿಕಾಸ್, "ಅದೊ, ಹಾವು ಹೊರಗೆ ಓಡಿಹೋಯಿತು" ಎಂದು ಹೇಳಿದನು.

ಚಾಲಕನಿಗೆ ಕೋಪ ಬಂತು. ಅವನನ್ನೇ ದಿಟ್ಟಿಸಿ ನೋಡಿದ. "ನೀನು ಸುಳ್ಳು ಹೇಳುತ್ತಿರುವೆ. ಹಾವು ಎಲ್ಲಿ?" ಎಂದು ಕೂಗಾಡಿದ.

"ನಿನ್ನಿಂದ ೩೦ ನಿಮಿಷಗಳು ವ್ಯರ್ಥವಾಗಿ ತಡವಾಯಿತು. ಇವನನ್ನು ಪ್ರಿನ್ಸಿಪಾಲ್ ಹತ್ತಿರ ಕರೆದುಕೊಂಡು ಹೋಗಬೇಕು" ಎಂದು ಚಾಲಕ ಗುಡುಗಾಡಿದ.

"ಹೌದು. ಇವನಿಂದ ಎಲ್ಲರಿಗೂ ಹೆದರಿಕೆ ಉಂಟಾಯಿತು" ಎಂದರು ಬೇರೆ ಮಕ್ಕಳು.

ಬಳಿಕ ಎಲ್ಲರೂ ಶಾಲೆಗೆ ಬಂದರು. ವಿಚಾರಣೆ ನಡೆಯಿತು. ವಿಕಾಸನನ್ನು ಎಲ್ಲರೂ ಖಂಡಿಸಿದರು. "ನಾಳೆ ನಿನ್ನ ತಾಯಿಯನ್ನು ಕರೆದುಕೊಂಡು ಬಾ" ಎಂದು ಪ್ರಿನ್ಸಿಪಾಲರು ಹೇಳಿದರು.

"ವಿಕಾಸ್, ನಿನ್ನ ಸಲುವಾಗಿ ಶಾಲೆಗೆ ಬರಲು ನನಗೇನೂ ಭಯವಿಲ್ಲ. ಆದರೆ ನಿಜವನ್ನು ಹೇಳು, ನಿಜವಾಗಿಯೂ ಬಸ್ಸಿನಲ್ಲಿ ಹಾವು ಇತ್ತೇನು?" ಮಗನ ತಲೆಯನ್ನು ನೇವರಿಸುತ್ತ, ತಾಯಿ ಕೇಳಿದಳು.

"ಅಮ್ಮ, ನಮ್ಮ ಶಾಲೆಗೆ ಇದರಿಂದ ಕೆಟ್ಟ ಹೆಸರು ಬರಬಾರದಲ್ಲವೆ?" ಎಂದನು ವಿಕಾಸ್.

"ನೀನು ಏನು ಹೇಳುತ್ತಿರುವೆ?"

"ನನ್ನ ಜೊತೆಯಲ್ಲಿ ಓದುವವರ ಜೀವಕ್ಕೆ ಏನೂ ತೊಂದರೆ ಆಗಬಾರದಲ್ಲವೆ?"

"ಪುಟ್ಟಾ, ನೀನೇನು ಹೇಳುತ್ತಿರುವೆ?"

"ಅಮ್ಮ, ಪಾಪ. ಡ್ರೈವರ್ ವಿಶ್ರಾಂತಿ ತೆಗೆದುಕೊಳ್ಳದೆ ತುಂಬ ಹೊತ್ತಿನಿಂದ ಗಾಡಿಯನ್ನು ನಡೆಸುತ್ತಿದ್ದಾರೆ. ಅವರು ಜೈಲಿಗೆ ಹೋಗಬಾರದು ಎಂದು ಎಣಿಸಿ 'ಹಾವು, ಹಾವು' ಎಂದು ಕೂಗಿದೆ."

"ಅದಕ್ಕಾಗಿ ಸುಳ್ಳು ಹೇಳಿದೆಯಾ?"

"ಹಾಗೆ ನಾನು ಕೂಗಲಿಲ್ಲವೆಂದರೆ, ಬಸ್ಸನ್ನು ನಡೆಸಿಕೊಂಡೇ ನಿದ್ದೆಮಾಡುತ್ತ ತಲೆ ಜೋತುಬೀಳುತ್ತಿದ್ದ ಡ್ರೈವರ್ ಅಂಕಲ್ ಅನ್ನು ಹೇಗೆ ತಾನೇ ಎಬ್ಬಿಸುವುದು?" ಎಂದು ವಿಕಾಸ್ ವಿವರಣೆ ಹೇಳಿದನು.

ಯಾವುದೇ ಕ್ಷಣದಲ್ಲಿ ಘಟಿಸಬಹುದಾಗಿದ್ದ ದೊಡ್ಡದೊಂದು ವಿಪತ್ತನ್ನು ತಡೆಗಟ್ಟಿದ ತನ್ನ ಮುದ್ದು ಮಗನನ್ನು ಲಾವಣ್ಯ ತುಂಬು ಅಭಿಮಾನದಿಂದ ತಬ್ಬಿಕೊಂಡಳು. ಕಣ್ಣೀರಿಡುತ್ತ ಹೇಳಿದಳು, "ವಿಕಾಸ್, ನೀನೇನೂ ತಪ್ಪು ಮಾಡಿಲ್ಲವಪ್ಪಾ. ಬಾ, ಊಟ ಮಾಡು."

"ಬೇಡಮ್ಮ, 'ಸುಳ್ಳು ಹೇಳಿದ ಬಾಯಿಗೆ ಊಟ ಸಿಗುವುದಿಲ್ಲ' ಎಂದು ನೀನೇ ಪದೇ ಪದೇ ಅನ್ನುತ್ತಾ ಇರುತ್ತೀಯ, ಅಲ್ಲವೇ?" ಎಂದು ನುಡಿದ ವಿಕಾಸ ಹಾಸಿಗೆಯ ಮೇಲೆ ಮಲಗಿ ನಿದ್ರೆ ಹೋದನು.

(ತಮಿಳಿನಿಂದ ಅನುವಾದ : ಕಲ್ಯಾಣಿ ವೆಂಕಟರಾಮನ್
ಆಧಾರ : 'ಶ್ರೀರಾಮಕೃಷ್ಣ ವಿಜಯಂ' ತಮಿಳು ಮಾಸಪತ್ರಿಕೆ)